# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ
# UNIVERSITY OF HORTICULTURAL SCIENCES, BAGALKOT

**ದಿನಾಂಕ 01–08–2017 ರಂದು ವ್ಯವಸ್ಥಾಪನಾ ಸಭಾಂಗಣ, ಉದ್ಯಾನಗಿರಿ, ತೋವಿವಿ, ಬಾಗಲಕೋಟ ಇಲ್ಲಿ ನಡೆದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ 41ನೇ ಸಭೆಯ ನಡುವಳಿಗಳು**

## MINUTES OF 41st MEETING OF THE BOARD OF MANAGEMENT HELD ON 01-08-2017 IN BOARD ROOM, UHS, BAGALKOT

ಹಾಜರಾದ ಸದಸ್ಯರು

**MEMBERS PRESENT**

| | | | |
|---|---|---|---|
| 1. | ಡಾ. ಡಿ. ಎಲ್. ಮಹೇಶ್ವರ್<br>ಕುಲಪತಿಗಳು ಹಾಗೂ ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ<br>ತೋವಿವಿ, ಬಾಗಲಕೋಟ. | : | ಅಧ್ಯಕ್ಷರು |
| | **Dr. D. L. Maheswar**<br>Vice-Chancellor and Chairman<br>Board of Management,UHS, Bagalkot. | | Chairman |
| 2. | ಶ್ರೀ ಎಂ. ಮಹೇಶ್ವರ್ ರಾವ್, ಭಾಆಸೇ<br>ಸರ್ಕಾರದ ಕಾರ್ಯದರ್ಶಿಗಳು, ಬೆಂಗಳೂರು ಹಾಗೂ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ತೋಟಗಾರಿಕೆ ಇಲಾಖೆ, ಎಂ. ಎಸ್. ಬಿಲ್ಡಿಂಗ್, ಬೆಂಗಳೂರು–560001. | : | ಸದಸ್ಯರು |
| | **Sri. M. Maheshwar Rao, IAS**<br>Secretary to GOK and Member,<br>Board of Management, UHS Bagalkot,<br>Dept. of Horticulture, M.S.Building,<br>Bengaluru-560001. | | Member |
| 3. | ಶ್ರೀ ಪ್ರಭಾಸ ಚಂದ್ರ ರೇ, ಐಎಫ್‌ಸ್<br>ತೋಟಗಾರಿಕೆ ಆಯುಕ್ತರು, ಬೆಂಗಳೂರು ಹಾಗೂ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ತೋಟಗಾರಿಕೆ ಇಲಾಖೆ, ಲಾಲ್‌ಭಾಗ<br>ಬೆಂಗಳೂರು–560004. | : | ಸದಸ್ಯರು |
| | **Shri Prabhash Chandra Ray, IFS**<br>Commissioner of Horticulture and Member,<br>Board of Management, UHS Bagalkot,<br>Dept. of Horticulture, Lalbagh,<br>Bangalore 560004. | | Member |
| 4. | ಶ್ರೀ ಬಸವರಾಜ ನೀಲಪ್ಪ ಶಿವಣ್ಣನವರ<br>ಶಾಸಕರು, ಬ್ಯಾಡಗಿ ಮತಕ್ಷೇತ್ರ ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಸಂಗಮೇಶ್ವರ ನಗರ, 6ನೇ ಕ್ರಾಸ್,<br>ಗುಮ್ಮನಹಳ್ಳಿ ರಸ್ತೆ, ಬ್ಯಾಡಗಿ,<br>ಹಾವೇರಿ ಜಿಲ್ಲೆ–5861106. | : | ಸದಸ್ಯರು |
| | **Sri Basavaraj Neelappa Shivannavar**<br>Member of Legislative Assembly and Member<br>Board of Management, UHS, Bagalkot<br>Byadgi Legislative Constituency<br>Sangmeshwar Nagar, 6th Cross<br>Gummanahalli Road, Byadgi<br>Haveri District-581 106. | | Member |

| | | | |
|---|---|---|---|
| 5. | **ಶ್ರೀ ಆರ್. ಚೌಡರೆಡ್ಡಿ, ತೂಪಲ್ಲಿ**<br>ವಿಧಾನ ಪರಿಷತ್ ಸದಸ್ಯರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ತೂಪಲ್ಲಿ ಗ್ರಾಮ, ಜೆ. ತಿಮ್ಮಸಂದ್ರ ಪೋಸ್ಟ್<br>ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ. | : | ಸದಸ್ಯರು |
| | **Sri R. Chowda Reddy Thoopalli**<br>Member of Legislative Council and Member<br>Board of Management, UHS, Bagalkot<br>Tupalli Village, J. Timmasandra Post<br>Srinivaspur Taluka, Kolar District. | | Member |
| 6. | **ಡಾ. ಹೆಚ್. ಬಿ. ಲಿಂಗಯ್ಯ**<br>ಶಿಕ್ಷಣ ನಿರ್ದೇಶಕರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ,<br>ಬಾಗಲಕೋಟ. | : | ಸದಸ್ಯರು |
| | **Dr. H. B. Lingaiah**<br>Director of Education and Member<br>Board of Management,<br>UHS, Bagalkot | | Member |
| 7. | **ಡಾ. ಕೆ. ಎಂ. ಇಂದಿರೇಶ್**<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಗಳು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ,<br>ಬಾಗಲಕೋಟ. | : | ಸದಸ್ಯ<br>ಕಾರ್ಯದರ್ಶಿಗಳು |
| | **Dr. K. M. Indiresh**<br>Registrar & Member-Secretary,<br>Board of Management,<br>Univeristiy of Horticultural Sciences,<br>Bagalkot. | | Member<br>Secretary |

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ ಇವರು ಸಭೆಗೆ ಹಾಜರಾದ ಎಲ್ಲ ಸದಸ್ಯರುಗಳನ್ನು ಹೂಗುಚ್ಛ ನೀಡುವ ಮೂಲಕ ಸ್ವಾಗತಿಸಿದರು. ಮಾನ್ಯ ಕುಲಪತಿಗಳಾದ ಡಾ. ಡಿ. ಎಲ್. ಮಹೇಶ್ವರ್ ಇವರು ಸಹ 41ನೇ ವ್ಯವಸ್ಥಾಪನಾ ಮಂಡಳಿ ಸಭೆಗೆ ಹಾಜರಾದ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು. ಕುಲಸಚಿವರು ಮಾನ್ಯ ಕುಲಪತಿಗಳು ಹಾಗೂ ಅಧ್ಯಕ್ಷರು ಇವರಿಗೆ ಸಭೆಯನ್ನು ಕೈಗೊಂಡು ಕಾರ್ಯಸೂಚಿಗಳನ್ವಯ ಚರ್ಚೆಗಳನ್ನು ಕೈಗೊಳ್ಳಲು ವಿನಂತಿಸಿದರು. ಸಭೆಯಲ್ಲಿ ಮಂಡಿಸಿದ ಈ ಕೆಳಗಿನ ಕಾರ್ಯಸೂಚಿಗಳನ್ನು ಚರ್ಚೆಗೆ ಕೈಗೆತ್ತಿಕೊಂಡು ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

At the outset, the Registrar and Member Secretary offered flower bouquets to members of the Board of Management and welcomed them. Hon'ble Vice Chancellor and Chairman also welcomed all the members of Board of Management of UHS, Bagalkot who have attended the 41st Meeting of Board of Management. The Registrar requested the Hon'ble Vice Chancellor and Chairman to chair the meeting and to conduct the deliberations as per the agenda for discussion. After the detailed deliberations and discussions on the agenda subjects, the following decisions were made during the Board meeting.

| | |
|---|---|
| ಕಾರ್ಯಸೂಚಿ ಸಂ.01 | ದಿನಾಂಕ 21.04.2017 ರಂದು ಜರುಗಿದ 40ನೇ ವ್ಯವಸ್ಥಾಪನಾ ಮಂಡಳಿಯ ಸಭೆಯ ನಡುವಳಿಗಳ ದೃಢೀಕರಣ. |
| | **ಚರ್ಚೆ ಮತ್ತು ಠರಾವು :**<br><br>40ನೇ ವ್ಯವಸ್ಥಾಪನಾ ಮಂಡಳಿ ಸಭೆಯ ನಡುವಳಿಗಳ ಮೇಲೆ ನಿಗದಿಪಡಿಸಿದ ದಿನಾಂಕದೊಳಗೆ ಯಾವುದೇ ಸದಸ್ಯರಿಂದ ಸಲಹೆಗಳು/ಟಿಪ್ಪಣಿಗಳು ಸ್ವೀಕೃತವಾಗದ ಕಾರಣ, ಸಭೆಯ ನಡುವಳಿಗಳನ್ನು ಅಳವಡಿಸಿಕೊಳ್ಳಲು ದೃಢೀಕರಿಸಲಾಯಿತು. |
| **Item No.01** | **Confirmation of the minutes of the 40th meeting of the Board of Management held on 21.04.2017.** |
| | **Discussion and Resolution :**<br><br>As there were no comments received from any of the members within the stipulated date, the minutes of the 40th meeting of Board of Management were confirmed for adoption. |
| ಕಾರ್ಯಸೂಚಿ ಸಂ.02 | ದಿನಾಂಕ 21.04.2017 ರಂದು ಜರುಗಿದ 40ನೇ ವ್ಯವಸ್ಥಾಪನ ಮಂಡಳಿ ಸಭೆಯ ನಡುವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ ಕುರಿತು. |
| | **ಚರ್ಚೆ ಮತ್ತು ಠರಾವು :**<br><br>ವ್ಯವಸ್ಥಾಪನಾ ಮಂಡಳಿಯ 40ನೇ ಸಭೆಯ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳನ್ನು ಅವಲೋಕಿಸಿತು ಮತ್ತು ಅದರ ಪ್ರಗತಿಗೆ ಮಂಡಳಿಯು ತನ್ನ ಒಪ್ಪಿಗೆಯನ್ನು ವ್ಯಕ್ತಪಡಿಸಿತು. ಕೈಗೊಂಡ ಕ್ರಮಗಳಿಗೆ ಮಂಡಳಿಯು ತನ್ನ ಅನುಮೋದನೆಯನ್ನು ನೀಡಿತು. |
| **Item No.02** | **Action taken report on the minutes of the 40th meeting of Board of Management held on 21.04.2017.** |
| | **Discussion and Resolution :**<br><br>The Board perused the action taken report and expressed its consent over the progress made. The Board accorded its approval for the actions taken. |
| ಕಾರ್ಯಸೂಚಿ ಸಂ.03 | ಗ್ಲೋಬಲ್ ವಾಟರ್ ಮೀಟ 2016 ಕ್ಕೆ ಆರ್ಥಿಕ ನೆರವು ಕುರಿತು. |
| | **ಚರ್ಚೆ ಮತ್ತು ಠರಾವು :**<br><br>ಮಂಡಳಿಯು ಕೃಷಿ ವಿಶ್ವವಿದ್ಯಾಲಯ, ಧಾರವಾಡವು 2016ರ ಅಕ್ಟೋಬರ್ 24 ರಿಂದ 26 ರವರೆಗೆ ಕರ್ನಾಟಕದ ಇತರ ಕೃಷಿ ವಿಶ್ವವಿದ್ಯಾಲಯಗಳು ಮತ್ತು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಸಂಸ್ಥೆಗಳ ಸಹಯೋಗದೊಂದಿಗೆ ಆಯೋಜಿಸಿದ ಗ್ಲೋಬಲ್ ವಾಟರ್ ಮೀಟ್–2016ಗಾಗಿ ಆರ್ಥಿಕ ನೆರವು ನೀಡುವ ಪ್ರಸ್ತಾವನೆಯನ್ನು ಪರಿಶೀಲಿಸಿತು. ವಿವರವಾದ ಚರ್ಚೆಯ ನಂತರ, ಮಂಡಳಿಯು ರೂ. 2 ಲಕ್ಷಗಳನ್ನು ಈ ಕಾರ್ಯಕ್ರಮದ ಸಹ–ಸಂಘಟಕರಾಗಿ ಆರ್ಥಿಕ ನೆರವು ನೀಡಲು ವಿಶ್ವವಿದ್ಯಾಲಯಕ್ಕೆ ತನ್ನ ಒಪ್ಪಿಗೆ ನೀಡಿತು. ಮುಂದುವರೆದು, ಇನ್ನುಮುಂದೆ ಇಂತಹ ಕಾರ್ಯಕ್ರಮಗಳಲ್ಲಿ ಇದೇ ರೀತಿಯ ಬೆಂಬಲವನ್ನು ಪಡೆಯಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿತು.<br><br>(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು) |

| | |
|---|---|
| **Item No.03** | **Financial support for Global Water Meet –2016 -reg.** |
| | **Discussion and Resolution :**<br>The Board examined the proposal for seeking financial support for Global Water Meet – 2016 organized by UAS, Dharwad during 24-26th October, 2016 in collaboration with other agricultural universities of Karnataka and national and international organizations. After detailed deliberations, the Board permitted the University to contribute Rs. 2.00 lakhs as a Co-organizer of the event. Further, Board suggested to University to seek similar support in such events in future.<br>**(Action : Comptroller)** |
| **ಕಾರ್ಯಸೂಚಿ ಸಂ.04** | **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದಲ್ಲಿ ಆರಂಭಿಕ ಹಂತದ ಸಹಾಯಕ ಪ್ರಾಧ್ಯಾಪಕರು/ಸಹಾಯಕ ಗ್ರಂಥಪಾಲಕರು ಮತ್ತು ತತ್ಸಮಾನ ಹುದ್ದೆಗಳು ಹಾಗೂ ಶಿಕ್ಷಕೇತರ ಹುದ್ದೆಗಳ ಭರ್ತಿ ಮಾಡಲು ಏಕರೂಪದ ವಯೋಮಿತಿ/ಮಾನದಂಡಗಳನ್ನು ನಿಗದಿಪಡಿಸುವ ಕುರಿತು.** |
| | **ಚರ್ಚೆ ಮತ್ತು ಠರಾವು:**<br>ಮಂಡಳಿಯು ಪ್ರಸ್ತಾವನೆಯನ್ನು ವಿವರವಾಗಿ ಪರಿಶೀಲಿಸಿತು ಮತ್ತು ದಿನಾಂಕ 8ನೇ ಮಾರ್ಚ್ 2017 ರಂದು ಗೌರವಾನ್ವಿತ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಕರ್ನಾಟಕ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳ 25ನೇ ಸಮನ್ವಯ ಸಮಿತಿಯ ಸಭೆಯ ನಿರ್ಧಾರ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಬೆಂಗಳೂರಿನ ನಿಯಮ & ನಿಬಂಧನೆಗಳನ್ನು ಪರಿಗಣಿಸಿ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದಲ್ಲಿ ಆರಂಭಿಕ ಹಂತದ ಸಹಾಯಕ ಪ್ರಾಧ್ಯಾಪಕರು ಅಥವಾ ಸಹಾಯಕ ಗ್ರಂಥಪಾಲಕರು ಮತ್ತು ತತ್ಸಮಾನ ಹುದ್ದೆಗಳನ್ನು ಹಾಗೂ ಶಿಕ್ಷಕೇತರ ಹುದ್ದೆಗಳನ್ನು ಭರ್ತಿ ಮಾಡಲು ಏಕರೂಪದ ವಯೋಮಿತಿ/ಮಾನದಂಡಗಳ ಪ್ರಸ್ತಾವನೆಗೆ ತನ್ನ ಅನುಮೋದನೆಯನ್ನು ನೀಡಿತು.<br>**ಶಿಕ್ಷಕ ಹುದ್ದೆಗಳಿಗೆ :**<br>ಆರಂಭಿಕ ಹುದ್ದೆಗಳಾದ ಸಹಾಯಕ ಪ್ರಾಧ್ಯಾಪಕ ಮತ್ತು ತತ್ಸಮಾನ ಹುದ್ದೆಗಳಿಗೆ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳ ಪ್ರಕಾರ ಮತ್ತು ಕಾಲಕಾಲಕ್ಕೆ ತಿದ್ದುಪಡಿಗಳಿಗೆ ಒಳಪಟ್ಟಂತೆ ಗರಿಷ್ಟ ವಯೋಮಿತಿಯು ಸಾಮಾನ್ಯ, ಇತರ ಹಿಂದುಳಿದ ವರ್ಗಗಳ ಮತ್ತು ಪಜಾ/ಪಪಂ/ಪ್ರವರ್ಗ–1 ಅಭ್ಯರ್ಥಿಗಳಿಗೆ ಕ್ರಮವಾಗಿ 35, 38 ಮತ್ತು 40 ವರ್ಷಗಳಾಗಿರತಕ್ಕದ್ದು.<br>**ಶಿಕ್ಷಕೇತರ ಹುದ್ದೆಗಳಿಗೆ :**<br>1. ಶಿಕ್ಷಕೇತರ ಆರಂಭಿಕ ಹುದ್ದೆಗಳಿಗೆ ಕನಿಷ್ಠ ವಯೋಮಿತಿಯು 18 ವರ್ಷಗಳಾಗಿರತಕ್ಕದ್ದು ಮತ್ತು ಗರಿಷ್ಟ ವಯೋಮಿತಿಯು ಸಾಮಾನ್ಯ, ಇತರೆ ಹಿಂದುಳಿದ ವರ್ಗಗಳ, ಪಜಾ/ಪಪಂ/ಪ್ರವರ್ಗ–1 ಅಭ್ಯರ್ಥಿಗಳಿಗೆ ಕ್ರಮವಾಗಿ 35, 38 ಮತ್ತು 40 ವರ್ಷಗಳಾಗಿರತಕ್ಕದ್ದು. ಆದಾಗ್ಯೂ, ಕ.ನಾ.ಸೇ. (ಸಾಮಾನ್ಯ ನೇಮಕಾತಿ) ನಿಯಮಗಳ ಮತ್ತು ಕಾಲಕಾಲಕ್ಕೆ ಹೊರಡಿಸುವ ತಿದ್ದುಪಡಿಗಳಿಗೆ ಒಳಪಟ್ಟಂತೆ ಗರಿಷ್ಟ ವಯೋಮಿತಿಯಲ್ಲಿ ವಿನಾಯಿತಿ ಇರುವುದು.<br>2. ಅನುಭವದ ಅಗತ್ಯವಿರುವಂತಹ ಹುದ್ದೆಗಳಿಗೆ ಗರಿಷ್ಠ ವಯೋಮಿತಿಯು 48 ವರ್ಷಗಳಾಗಿರತಕ್ಕದ್ದು.<br>3. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟದ ಡಿಆರ್‌ಇ/ಎಂಆರ್‌ಇ ನೌಕರರನ್ನು ಒಳಗೊಂಡಂತೆ ಸೇವಾ ನಿರತ ಅಭ್ಯರ್ಥಿಗಳಿಗೆ ವಯೋಮಿತಿಯು ಅನ್ವಯಿಸುವುದಿಲ್ಲ.<br>ಮಂಡಳಿಯು ಈಗಾಗಲೇ 40ನೇ ವ್ಯವಸ್ಥಾಪನ ಮಂಡಳಿಯ ಸಭೆಯಲ್ಲಿ ಅನುಮೋದಿಸಿದ ಕರಡು ನೇಮಕಾತಿ ಅಧಿಸೂಚನೆಗಳಲ್ಲಿಯೂ ಕೂಡಾ ಏಕರೂಪದ ವಯೋಮಿತಿ ಮಾನದಂಡಗಳನ್ನು ಮಾರ್ಪಡಿಸಲು ಸಲಹೆ ನೀಡಿತು ಮತ್ತು ನಡುವಳಿಗಳ ಧೃಡೀಕರಣಕ್ಕಾಗಿ ಕಾಯದೆ ಕರ್ನಾಟಕ ಸರ್ಕಾರದ |

| | |
|---|---|
| | ಮುಖಾಂತರ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲು ಸಹ ಮಂಡಳಿಯು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿತು. ಮುಂದುವರೆದು, ವಿಶ್ವವಿದ್ಯಾಲಯದ ಮುಂಬರುವ ನೇಮಕಾತಿಗಳಲ್ಲಿ ಮೇಲಿನ ಏಕರೂಪದ ವಯೋಮಿತಿ ಮಾನದಂಡಗಳನ್ನು ಅನುಸರಿಸಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿತು.<br><br>(ಕ್ರಮ : ಕುಲಸಚಿವರು) |
| **Item No.04** | **Common age criteria for filling up of the entry level posts of Assistant Professor or Assistant Librarian and equivalent and also service personnel posts in UHS Bagalkot – reg.** |
| | **Discussion & Resolution :**<br><br>The Board perused the proposal in detail and considering the decision of the 25th Meeting of Coordination Committee of all farm universities in the State held on 08.03.2017 and also as per rules and regulations of DPAR, GOK, Bengaluru, Board accorded its approval for the proposal for common age criteria for filling up of the entry level posts of Assistant Professor or Assistant Librarian and equivalent and also service personnel posts in UHS, Bagalkot as under ;<br>**For Teaching Posts:**<br>The upper age limit for entry level Assistant Professor and equivalent shall be 35, 38 and 40 years for General, OBC and SC/ST/Cat-I candidates respectively and the relaxation for upper age limit is as prescribed in KCS (General Recruitment) Rules and as amended from time to time.<br><br>**For Service Personnel:**<br>a) For such of the entry level posts, the minimum age limit shall be 18 years and maximum age limit 35, 38 and 40 years for General, OBC and SC/ST/Cat-I candidates respectively. However, the relaxation for upper age limit is as prescribed in KCS (General Recruitment) Rules and as amended from time to time.<br>b) For such of the posts which requires experience, the maximum age limit shall be 48 years.<br><br>c) Age limit is not applicable to the in-service candidates including MRE/DRE employees of the University.<br><br>Board also suggested the University to incorporate the above common age criteria in the draft recruitment notifications already approved in the 40th Meeting of Board of Management and also to submit the same to the Hon'ble Governor of Karnataka through Government of Karnataka for approval without waiting for the confirmation of the minutes. Further, Board suggested the University to follow the above common age criteria in forthcoming recruitments of the University.<br>**(Action : Registrar)** |

| | |
|---|---|
| ಕಾರ್ಯಸೂಚಿ ಸಂ.05 | ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದಲ್ಲಿ ಅನುಭವ ಆಧಾರಿತ ಶಿಕ್ಷಕ/ ಶಿಕ್ಷಕೇತರ ನೌಕರರು ದಿನಾಂಕ **01.04.2006** ಕ್ಕಿಂತ ಮುಂಚೆ ಹಳೆ ಪಿಂಚಣಿ ಅಡಿಯಲ್ಲಿ ಬರುವವರಿಗೆ ಮುಂದುವರೆದ ಸೇವೆ ಎಂದು ಪರಿಗಣಿಸಿ ದಿನಾಂಕ **01.04.2006**ರ ನಂತರವು ಅಂತವರಿಗೆ ಹಳೆ ಪಿಂಚಣಿ ಸೌಲಭ್ಯವನ್ನು ಮುಂದುವರೆಸುವ ಕುರಿತು. |
| | ಚರ್ಚೆ ಮತ್ತು ಠರಾವು :<br><br>ಮಂಡಳಿಯು ದಿನಾಂಕ 01.04.2006ರ ಪೂರ್ವದಲ್ಲಿ ಬೇರೆ ವಿಶ್ವವಿದ್ಯಾಲಯಗಳಲ್ಲಿ ಅಥವಾ ಇಲಾಖೆಗಳಲ್ಲಿ ಖಾಯಂ ನೌಕರರಾಗಿದ್ದು, ತದನಂತರ ಈ ವಿಶ್ವವಿದ್ಯಾಲಯದ ಸೇವೆಗೆ ಸೇರಿದ ನೌಕರರಿಗೆ ಹಳೆಯ ಪಿಂಚಣಿ ಯೋಜನೆಯನ್ನು ವಿಸ್ತರಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿತು, ವಿವರವಾದ ಚರ್ಚೆಗಳ ನಂತರ, ರಾಜ್ಯ ಸರ್ಕಾರದ ಇತರೆ ಇಲಾಖೆಗಳಲ್ಲಿ ಅನ್ವಯಿಸಿದಂತೆ, ತೋವಿವಿ ಬಾಗಲಕೋಟದಲ್ಲಿಯೂ ಕೂಡಾ ಈ ನಿಯಮಗಳನ್ನು ಅಳವಡಿಸಿಕೊಳ್ಳಲು ಅಧೀಕೃತ ಜ್ಞಾಪನ ಪತ್ರ ಸಂಖ್ಯೆ:FD(Spl)01 PEN 2007 ದಿನಾಂಕ 12.07.2017ನ್ನು ಉಲ್ಲೇಖಿಸಿ ಮತ್ತೊಮ್ಮೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br><br>(ಕ್ರಮ : ಆಡಳಿತಾಧಿಕಾರಿಗಳು) |
| **Item No.05** | **Considering the continuation of Old Pension Scheme to teaching and non-teaching staff- reg.** |
| | **Discussion & Resolution :**<br>The Board examined the proposal for extending old pension scheme to those who were permanent employees of other universities or departments before 01.04.2006 and later joined to this University services. After detailed deliberations, Board suggested the University to resubmit the proposal to the Government by quoting the Official Memorandum No.FD(Spl)01 PEN 2007, dated:12.07.2007 for adopting similar rules to UHS as it is applied in other State Government departments.<br><br>**(Action : Administrative Officer)** |
| ಕಾರ್ಯಸೂಚಿ ಸಂ.06 | ನ್ಯಾಯವಾದಿಗಳ ಹೆಸರನ್ನು ವಿಶ್ವವಿದ್ಯಾಲಯದ ಪೆನಲ್‌ನಲ್ಲಿ ಸೇರಿಸಿಕೊಳ್ಳುವ ಕುರಿತು. |
| | ಚರ್ಚೆ ಮತ್ತು ಠರಾವು :<br>ವಿವಿಧ ನ್ಯಾಯಾಲಯಗಳಲ್ಲಿರುವ ವಿಶ್ವವಿದ್ಯಾಲಯದ ಪ್ರಕರಣಗಳನ್ನು ಪ್ರತಿಪಾದಿಸಲು ವಕೀಲರನ್ನು ಗುರುತಿಸಲು ಪ್ರಸ್ತಾವನೆಯನ್ನು ಮಂಡಳಿ ಪರಿಶೀಲಿಸಿತು. ಯಾದೃಚ್ಛಿಕ ಆಯ್ಕೆಯ ಬದಲಿಗೆ ಕಾನೂನು ಇಲಾಖೆಯ ಪೆನಲ್‌ನಿಂದ ವಕೀಲರನ್ನು ಆಯ್ಕೆ ಮಾಡುವಂತೆ ಮಂಡಳಿಯು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿತು. ಆದ್ದರಿಂದ, ಪ್ರಸ್ತುತ ಪ್ರಸ್ತಾವನೆಯು ತಿರಸ್ಕೃತಗೊಂಡಿತು.<br>(ಕ್ರಮ : ಆಡಳಿತಾಧಿಕಾರಿಗಳು) |
| **Item No.06** | **Recognition of advocates for pleading University cases in various courts – reg.** |
| | **Discussion & Resolution :**<br><br>The Board went through the proposal for recognition of advocate for pleading University cases in various courts. The Board suggested the University to select advocates from Law Department Panel instead of random selection. Hence, the present proposal is rejected.<br><br>**(Action : Administrative Officer)** |

| | |
|---|---|
| ಕಾರ್ಯಸೂಚಿ ಸಂ.07 | **ತೋ.ವಿ.ವಿ.ಬಾಗಲಕೋಟೆಯಲ್ಲಿ 'ಸಿ' ಮತ್ತು 'ಡಿ' ವೃಂದದ ಹುದ್ದೆಗಳಿಗೆ ರೂ.10/– ಕಡಿಮೆ ಮೂಲ ವೇತನ, ದಿನಗೂಲಿ/ ಗುತ್ತಿಗೆ ಆಧಾರದ/ ಕ್ರೋಢಿಕೃತ/ ಗೌರವ ಧನದ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವವರನ್ನು ಸರ್ಕಾರದಿಂದ ಹೊರಗುತ್ತಿಗೆ ಮುಖಾಂತರ ಕೆಲಸಕ್ಕೆ ತೆಗೆದುಕೊಳ್ಳಲು ಪರವಾಟಿಗೆ ಬರುವವರೆಗೆ ತೋ.ವಿ.ವಿ.ಯ ಹಿತದೃಷ್ಟಿಯಿಂದ ಈಗಿರುವ ವ್ಯವಸ್ಥೆಯಲ್ಲಿ ಮುಂದುವರೆಸುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br><br>ಮಂಡಳಿಯು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದಲ್ಲಿ ಹೊರಗುತ್ತಿಗೆ ಮೂಲಕ ಎಸ್ ಆರ್ ದರ / ಡಿ ಎಲ್. ಆರ್ / ಮೂಲವೇತನ (ರೂ. 10 ಕಡಿಮೆ)/ಕನ್ಸಾಲಿಡೇಟ/ಗೌರವಧನ ಆಧಾರದ ಮೇಲೆ ಗುತ್ತಿಗೆ (ಸಿ & ಡಿ ಗ್ರೂಪ್) ಕೆಲಸಗಾರರನ್ನು ತೆಗೆದುಕೊಳ್ಳಲು ಪ್ರಸ್ತುತ ಇರುವ ವ್ಯವಸ್ಥೆಯನ್ನು ಮಂದುವರೆಸುವ ಪ್ರಸ್ತಾವನೆಯನ್ನು ಪರಿಶೀಲಿಸಿತು. ವಿಷಯದ ಕುರಿತು ವಿವರವಾದ ಚರ್ಚೆಯ ನಂತರ, ಮಂಡಳಿಯು 2017–18 ರ ಹಣಕಾಸಿನ ವರ್ಷದಲ್ಲಿ ಪ್ರಸ್ತುತ ಇರುವ ಗುತ್ತಿಗೆ ಆಧಾರದ ನೇಮಕಾತಿ ವಿಧಾನವನ್ನು ಮಂದುವರೆಸುವುದಕ್ಕೆ ತನ್ನ ಅನುಮೋದನೆಯನ್ನು ನೀಡಿತು. ಮಂದುವರೆದು, ಇನ್ನುಮುಂದೆ, ವಿಶ್ವವಿದ್ಯಾಲಯದಲ್ಲಿ ಮೂಲವೇತನ (ರೂ. 10/–ನ್ನು ಕಡಿತಗೊಳಿಸುವ) ವಿಧಾನದಲ್ಲಿ ರೋಸ್ಟರ್‌ನ್ನು ಅನುಸರಿಸಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿದೇಶನ ನೀಡಿತು.<br><br>(ಕ್ರಮ : ಆಡಳಿತಾಧಿಕಾರಿಗಳು) |
| **Item No.07** | **Continuation of present system for engagement of contractual workers (C & D Group) working on SR rate/DLR/ basic (less rs.10)/consolidate/honorarium basis through outsourcing –reg.** |
| | **Discussion & Resolution :**<br><br>The Board went through the proposal for continuation of present system for engagement of contractual workers (C & D Group) working on SR rate/DLR/basic (less Rs.10)/consolidate/ honorarium basis through outsourcing at UHS Bagalkot. After detailed deliberation of the subject, the Board accorded its approval for continuation of existing contractual appointment system for the financial year 2017-18. Further, Board directed the University to follow the roaster while according basic payment (less Rs.10) system in the University in future.<br><br>**(Action : Administrative Officer)** |
| ಕಾರ್ಯಸೂಚಿ ಸಂ.08 | **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳ ವಸತಿ ನಿಲಯ ಕಟ್ಟಡದ ಕಾಮಗಾರಿಯ (ಹೆಚ್ಚಿನ) ಪರಿಷ್ಕೃತ ವೆಚ್ಚಕ್ಕೆ ಅನುಮೋದನೆ ನೀಡುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br><br>ತೋವಿವಿ, ಬಾಗಲಕೋಟದ ಉದ್ಯಾನಗಿರಿ ಆವರಣದಲ್ಲಿ ಬಾಲಕರ ಸ್ನಾತಕೋತ್ತರ ವಸತಿನಿಲಯದ ನಿರ್ಮಾಣದ ಪರಿಷ್ಕೃತ ಅಂದಾಜು ಕುರಿತು ಪ್ರಸ್ತಾವನೆಯನ್ನು ಮಂಡಳಿಯು ಪರಿಶೀಲಿಸಿತು. ವಿವರವಾದ ಚರ್ಚೆಯ ನಂತರ, ರೂ. 3,22,75,979–00 ಗಳ (ರೂಪಾಯಿ ಮೂರು ಕೋಟಿ ಇಪ್ಪತ್ತೆರಡು ಲಕ್ಷಗಳು ಎಪ್ಪತ್ತೈದು ಸಾವಿರ ಒಂಭತ್ತು ನೂರ ಎಪ್ಪತ್ತು ಒಂಭತ್ತು ಮಾತ್ರ) ಪರಿಷ್ಕೃತ ಅಂದಾಜು ಮೊತ್ತಕ್ಕೆ ಮಂಡಳಿಯು ತನ್ನ ಅನುಮೋದನೆಯನ್ನು ನೀಡಿತು. ಆಸ್ತಿ ಅಧಿಕಾರಿಗಳ ಕಛೇರಿಯಿಂದ ಕೈಗೊಳ್ಳಲಾದ ಸಿವಿಲ್ ಕಾಮಗಾರಿಗಳನ್ನು ಪರಿಶೀಲಿಸಲು ಮತ್ತು ಪ್ರಮಾಣೀಕರಿಸಲು ನಡುವಳಿಗಳ ದೃಢೀಕರಣಕ್ಕಾಗಿ ಕಾಯದೆ ಈ ಕೆಳಗಿನ ಸದಸ್ಯರನ್ನು ಒಳಗೊಂಡ ಸಮಿತಿಯನ್ನು ರಚಿಸಲು ಸಹ ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು. |

| | |
|---|---|
| | 1. ಕುಲಪತಿಗಳು – ಅಧ್ಯಕ್ಷರು<br>2. ಶಿಕ್ಷಣ ನಿರ್ದೇಶಕರು – ಸದಸ್ಯರು<br>3. ಕುಲಸಚಿವರು – ಸದಸ್ಯರು<br>4. ಆಸ್ತಿ ಅಧಿಕಾರಿಗಳು – ಸದಸ್ಯರು<br><br>ಮುಂದುವರೆದು, ವ್ಯವಸ್ಥಾಪನ ಮಂಡಳಿಯು ತೋವಿವಿ, ಬಾಗಲಕೋಟದಲ್ಲಿ ಓರ್ವ ವ್ಯವಸ್ಥಾಪನ ಮಂಡಳಿಯ ಸದಸ್ಯರನ್ನು (non-official) ಒಳಗೊಂಡಂತೆ ಕಾಮಗಾರಿ ಸಮಿತಿಯನ್ನು ರಚಿಸಲು ಅವಕಾಶ ಮತ್ತು ಅಗತ್ಯತೆಯ ಬಗ್ಗೆ ಹಾಗೂ ರಾಜ್ಯದ ಇತರ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಅನುಸರಿಸುತ್ತಿರುವ ನಿಬಂಧನೆಗಳನ್ನು ಪರಿಶೀಲಿಸಿ ವಿವರಿಸಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br><br>(ಕ್ರಮ : ಆಸ್ತಿ ಅಧಿಕಾರಿಗಳು/ಕುಲಸಚಿವರು) |
| **Item No.08** | **Accordal of approval to the revised estimate of construction of PG hostel for boys at Udyanagiri of UHS, Bagalkot – reg.** |
| | **Discussion & Resolution :**<br><br>Board examined the proposal for approval to the revised estimate of construction of PG hostel for boys at Udyanagiri of UHS, Bagalkot. After detail deliberations, the Board accorded its approval for the revised estimate of Rs. 3,22,75,979-00 (Rupees Three Crores Twenty Two Lakhs Seventy Five Thousand Nine Hundred and Seventy Nine only). Board also directed the University to constitute a committee to inspect and certify the civil works undertaken by the Estate Office with the following members without waiting for confirmation of the minutes.<br><br>1. Vice-Chancellor - Chairman<br>2. Director of Education - Member<br>3. Registrar - Member<br>4. Estate Officer - Member Secretary<br><br>Further, Board directed the University to explain the provision and necessity to constitute Works Committee of UHS, Bagalkot including one of the non-official members by duly verifying the similar provisions operative in other farm universities of the state.<br><br>**(Action : Estate Officer/Registrar)** |
| **ಕಾರ್ಯಸೂಚಿ ಸಂ.09** | **ಶ್ರೀಮತಿ ಚಿತ್ರಾ ಫ್ಲೇವಿಯಾ ಫೆರ್ನಾಂಡೀಸ್, ಸಹಾಯಕ–ಗಣಕಯಂತ್ರ ನಿರ್ವಾಹಕರು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ ಇವರನ್ನು ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗಕ್ಕೆ ನಿಯೋಜಿಸುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br><br>ಮಂಡಳಿಯು ಶ್ರೀಮತಿ ಚಿತ್ರಾ ಫ್ಲೇವಿಯಾ ಫೆರ್ನಾಂಡೀಸ್, ಸಹಾಯಕ–ಗಣಕಯಂತ್ರ ನಿರ್ವಾಹಕರು, ತೋವಿವಿ, ಬಾಗಲಕೋಟ ಇವರನ್ನು ಕೃತೋವಿವಿ, ಶಿವಮೊಗ್ಗಕ್ಕೆ ಮೂರು ವರ್ಷಗಳ ಕಾಲ ನಿಯೋಜನೆ ಮಾಡುವ ಕುರಿತು ಪ್ರಸ್ತಾವನೆಯನ್ನು ಕೈಗೆತ್ತಿಕೊಂಡಿತು. ವಿವರವಾದ ಚರ್ಚೆಯ ನಂತರ, ತೋವಿವಿ ಅಧಿನಿಯಮ / ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ನು ಅನುಸಾರ ಶ್ರೀಮತಿ ಚಿತ್ರಾ ಫ್ಲೇವಿಯಾ ಫೆರ್ನಾಂಡೀಸ್, ತೋವಿವಿ, ಬಾಗಲಕೋಟ ಇವರನ್ನು ವಿಶ್ವವಿದ್ಯಾಲಯದಲ್ಲಿ ಅವಶ್ಯಕತೆಯ ವಿಮರ್ಶೆಗೆ ಒಳಪಟ್ಟು ಮೂರು ವರ್ಷಗಳ ಕಾಲ ಕೃತೋವಿವಿ, ಶಿವಮೊಗ್ಗಕ್ಕೆ ನಿಯೋಜಿಸಲು |

| | |
|---|---|
| | ಮಂಡಳಿಯು ತನ್ನ ಅನುಮೋದನೆ ನೀಡಿತು. ಮುಂದುವರೆದು, ಮಂಡಳಿಯು ಈ ವಿಷಯದಲ್ಲಿ ಅಗತ್ಯ ಕ್ರಮ ತೆಗೆದುಕೊಳ್ಳಲು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿತು.<br><br>(ಕ್ರಮ : ಆಡಳಿತಾಧಿಕಾರಿಗಳು) |
| **Item No.09** | **Deputation of Smt. Chitra Flavia Fernades, Assistant–Cum-Computer Operator, UHS Bagalkot to UAHS, Shivamoga – reg.** |
| | **Discussion & Resolution :**<br><br>The Board went through the proposal regarding deputation of Mrs Smt. Chitra Flavia Fernades, Assistant–Cum-Computer Operator, UHS Bagalkot to UAHS, Shivamoga for a period of 3 years. After detailed discussion and the provision of UHS Act/KCSR the Board accorded its approval for deputation of Mrs Smt. Chitra Flavia Fernades, UHS Bagalkot for a period of three years subjected to review of necessity in the University. Further, the Board suggested to take necessary action in this matter.<br><br>**(Action : Administrative Officer)** |
| **TABLE AGENDA** | |
| **ಕಾರ್ಯಸೂಚಿ ಸಂ.01** | **ದಿನಾಂಕ 28.07.2017 ರಂದು ಜರುಗಿದ 16ನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.** |
| | **ಚರ್ಚೆ ಮತ್ತು ಠರಾವು :**<br><br>ದಿನಾಂಕ 28.07.2017 ರಂದು ಜರುಗಿದ ತೋವಿವಿ, ಬಾಗಲಕೋಟದ ಹಣಕಾಸು ಸಮಿತಿಯ 16ನೇ ಸಭೆಯ ನಡುವಳಿಗಳನ್ನು ವ್ಯವಸ್ಥಾಪನ ಮಂಡಳಿ ಸಭೆಗೆ ಮಂಡಿಸಲಾಯಿತು ಮತ್ತು ಹಣಕಾಸು ಸಮಿತಿಯ ನಿರ್ಧಾರಗಳನ್ನು ಪರಿಶೀಲಿಸಿದ ನಂತರ, ಮಂಡಳಿಯು ನಡುವಳಿಗಳಿಗೆ ತನ್ನ ಅನುಮೋದನೆಯನ್ನು ನೀಡಿತು. ಮಂಡಳಿಯು 2016–17ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ಸರ್ಕಾರಕ್ಕೆ ಸಲ್ಲಿಸಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br><br>(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು) |
| **Item No. 01** | **Approval of proceedings of the 16th meeting of Finance Committee of UHS, Bagalkot held on 28.07.2017 – reg.** |
| | **Discussion & Resolution :**<br><br>The proceedings of 16th Meeting of Finance Committee of UHS, Bagalkot held on 28.07.2017 was placed before the Board and after going through decisions of the finance committee, Board accorded its approval for the same. Board directed the University to submit the annual accounts to the Government for the year 2016-17.<br><br>**(Action: Comptroller)** |

| | |
|---|---|
| **ಕಾರ್ಯಸೂಚಿ ಸಂ.02** | **ಸಿಎಎಸ್–2006ರ ಅಡಿಯಲ್ಲಿ ಶಿಕ್ಷಕರ ಪದೋನ್ನತಿಗೆ ಅನುಮೋದನೆ ನೀಡುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br><br>ವ್ಯವಸ್ಥಾಪನ ಮಂಡಳಿಯು ಸದರಿ ಪ್ರಸ್ತಾವನೆಯನ್ನು ಪುನರ್–ಪರಿಶೀಲಿಸಿತು ಮತ್ತು ಸುಧೀರ್ಘ ಚರ್ಚೆಯ ನಂತರ, ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಸಿಎಎಸ್–2006ರ ನಿಯಮಾವಳಿಗಳ ಅಡಿಯಲ್ಲಿಯ ಶಿಕ್ಷಕರುಗಳ ಪದೋನ್ನತಿ/ಉನ್ನತೀಕರಣ ಆದೇಶಗಳು ದಿನಾಂಕ 22.03.2017ರಂದು ಹೊರಡಿಸಲಾದ ಸರ್ಕಾರದ ಸುತ್ತೋಲೆಯ ವ್ಯಾಪ್ತಿಯಲ್ಲಿ ಒಳಪಡದ ಕಾರಣ, ಮಂಡಳಿಯು ನಡುವಳಿಗಳ ದೃಢೀಕರಣಕ್ಕಾಗಿ ಕಾಯದೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಅನುಮೋದನೆಯನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು. ಸಿಎಎಸ್–2006ರ ಅಡಿಯಲ್ಲಿ ರಾಯಚೂರು ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಶಿಕ್ಷಕರುಗಳಿಗೆ ಪದೋನ್ನತಿ ಆದೇಶಗಳನ್ನು ಹೊರಡಿಸಿದ್ದು ಇರುತ್ತದೆ. ಸರ್ಕಾರದಿಂದ ಅನುಮೋದನೆಯನ್ನು ಪಡೆದ ನಂತರ ಕೂಡಲೇ ಪದೋನ್ನತಿ ಆದೇಶಗಳನ್ನು ಹೊರಡಿಸಲಾಗುವುದು.<br><br>(ಕ್ರಮ : ಕುಲಸಚಿವರು) |
| **Item No. 02** | **Approval for promotion of teachers under CAS-2006 – reg.** |
| | **Discussion & Resolution :**<br><br>The Board re-examined the proposal and after detail deliberations, directed the University to submit the proposal to the Principal Secretary, Department of Horticulture, GOK, Bengaluru for approval, since the promotion/upgradation orders of teachers under CAS-2006 guidelines of ICAR does not come under the purview of Government circular issued on 22.03.2017 without waiting for confirmation of the minutes. Also, the UAS, Raichur and UAS, Bengaluru have already issued promotion orders to the teachers under CAS-2006. After getting approval from the Government, the promotion orders will be issued immediately.<br><br>**(Action: Registrar)** |
| **ಕಾರ್ಯಸೂಚಿ ಸಂ.03** | **ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ನವದೆಹಲಿ ಇವರಿಂದ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳ ಶ್ರೇಯಾಂಕ ಮತ್ತು ವರ್ಗೀಕರಣ ಹಾಗೂ ಕಿರಿಯ ಸಂಶೋಧನಾ ಫೆಲೋಷಿಪ್ ಮತ್ತು ಹಿರಿಯ ಸಂಶೋಧನಾ ಫೆಲೋಷಿಪ್ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೋವಿವಿ ಬಾಗಲಕೋಟದ ವಿದ್ಯಾರ್ಥಿಗಳ ಸಾಧನೆ.** |
| | **ಚರ್ಚೆ ಮತ್ತು ಠರಾವು :**<br><br>ಸದಸ್ಯ ಕಾರ್ಯದರ್ಶಿಗಳು ಸನ್ 2016–17ನೇ ಸಾಲಿನಲ್ಲಿ ದಿನಾಂಕ 17.07.2017 ರಂದು ಜರುಗಿದ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆಯ ಸಂದರ್ಭದಲ್ಲಿ, ಭಾರತೀಯ ಕೃಷಿ ಅನುಸಂದಾನ ಪರಿಷತ್, ನವದೆಹಲಿಯು ಪರಿಗಣಿತ/ಕೇಂದ್ರಿಯ ಕೃಷಿ ವಿಶ್ವವಿದ್ಯಾಲಯಗಳು ಸೇರಿದಂತೆ ಒಟ್ಟು **57** ಕೃಷಿ ವಿಶ್ವವಿದ್ಯಾಲಯಗಳ ಪೈಕಿ ತೋವಿವಿ, ಬಾಗಲಕೋಟೆಗೆ 13ನೇ ಸ್ಥಾನವನ್ನು ಘೋಷಿಸಿರುವುದನ್ನು ಸಭೆಗೆ ವಿವರಿಸಿದರು. ಈ ಸ್ಥಾನವು ದೇಶದ ತೋಟಗಾರಿಕೆ ವಿಶ್ವವಿದ್ಯಾಲಯಗಳಲ್ಲಿ ಮೊದಲ ಮತ್ತು ರಾಷ್ಟ್ರ ಮಟ್ಟದಲ್ಲಿ 6ನೇ ಶ್ರೇಯಾಂಕ ಪಡೆದ ಕೃಷಿ ವಿಶ್ವವಿದ್ಯಾಲಯ, ಬೆಂಗಳೂರಿನ ನಂತರ ರಾಜ್ಯ ಮಟ್ಟದಲ್ಲಿ ಎರಡನೇ ಸ್ಥಾನವಾಗಿದೆ. ರಾಷ್ಟ್ರ ಮಟ್ಟದಲ್ಲಿ ತೋಟಗಾರಿಕೆ ಅಡಿಯಲ್ಲಿ ಲಭ್ಯವಿರುವ 71 ಕಿರಿಯ ಸಂಶೋಧನಾ ಫೆಲೋಶಿಪ್‌ಗಳಲ್ಲಿ ನಮ್ಮ ವಿದ್ಯಾರ್ಥಿಗಳು 36 ಕಿರಿಯ |

| | |
|---|---|
| | ಸಂಶೋಧನಾ ಫೆಲೋಶಿಪ್‌ಗಳನ್ನು ಪಡೆದುಕೊಂಡಿದ್ದಾರೆ, ಇದು ಭಾರತೀಯ ಕೃಷಿ ಅನುಸಂದಾನ ಪರಿಷತ್‌ನಿಂದ ನೀಡಿರುವ ಒಟ್ಟು ಫೆಲೋಶಿಪ್‌ಗಳಲ್ಲಿ ಶೇ 50 % ಕ್ಕಿಂತ ಹೆಚ್ಚಾಗಿರುವುದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು. ಮಂಡಳಿಯ ಕುಲಪತಿಗಳು, ಸದಸ್ಯ-ಕಾರ್ಯದರ್ಶಿಗಳು ಮತ್ತು ಅವರ ತಂಡದವರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸದರಿ ಶ್ರೇಯಾಂಕ ಮತ್ತು ವರ್ಗೀಕರಣ ವಿಷಯವನ್ನು ವ್ಯಾಪಕ ಪ್ರಚಾರ ಮಾಡಲು ಮತ್ತು ತೋವಿವಿಯ ಅಂತರ್ಜಾಲದಲ್ಲಿ ಅಳವಡಿಸಲು ಹಾಗೂ ಸದರಿ ಪ್ರಮಾಣ ಪತ್ರಗಳನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರದರ್ಶಿಸಲು ಸಲಹೆ ನೀಡಿದರು.<br><br>(ಕ್ರಮ : ಕುಲಸಚಿವರು) |
| **Item No. 03** | **Rating and Grading of State Agricultural Universities by the Indian Council of Agricultural Research, New Delhi and performance of students of UHS, Bagalkot in JRF and SRF competitive examinations – reg.** |
| | **Discussion & Resolution :**<br><br>The Member Secretary explained about the Rating and Grading of State Agricultural Universities by the Indian Council of Agricultural Research, New Delhi has declared 13th rank to UHS, Bagalkot among 57 state farm universities including ICAR deemed/central agricultural universities in the country during the Foundation Day of ICAR held on 17.07.2017 for the year 2016-17. The position has been first among Horticultural Universities in the country. Within the state of Karnataka our University secured Second Position in the State after UAS, Bengaluru which secured 6th rank in the national level. Out of 71 JRFs available under horticulture at national level, our students have secured 36 JRFs, which is more than 50% of total fellowships allotted by ICAR. The Board appreciated the Vice-Chancellor, Member Secretary and their team and all those involved and suggested to make wider publicity of ranking and grading of the University and upload the same in University website for wider coverage and suggested to display the certificate in the University premises.<br><br>**(Action: Registrar)** |
| | **ANY OTHER ITEM WITH THE PERMISSION OF THE CHAIR** |
| **01** | Member Secretary explained that, Government of Karnataka has sanctioned 21 teaching and 23 non-teaching posts to the newly established College of Horticulture Engineering and Food Technology, Devious (Haveri) coming under the jurisdiction of University of Horticultural Sciences, Bagalkot vide order No. ತೋಇ 433 ತೋವಿ 2016, ಬೆಂಗಳೂರು, dated 03-07-2017. After detail deliberations, Board directed the University to send the draft notification to Hon'ble Governor and Chancellor, UHS, Bagalkot through Government of Karnataka for approval without waiting for the confirmation of the minutes.<br><br>**(Action: Registrar)** |

| | ಅಧ್ಯಕ್ಷರ ಅನುಮತಿಯೊಂದಿಗೆ ಇತರೆ ವಿಷಯಗಳನ್ನು ಚರ್ಚಿಸಲಾಯಿತು. |
|---|---|
| **01** | ಕರ್ನಾಟಕ ಸರಕಾರವು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದ ಅಡಿಯಲ್ಲಿ ನೂತನವಾಗಿ ಸ್ಥಾಪಿತವಾದ ತೋಟಗಾರಿಕೆ ಅಭಿಯಾಂತ್ರಿಕ ಹಾಗೂ ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸುರ (ಹಾವೇರಿ) ಇಲ್ಲಿಗೆ 21 ಬೋಧಕ ಹಾಗೂ 23 ಬೋಧಕೇತರ ಹುದ್ದೆಗಳನ್ನು ಆದೇಶ ಸಂ. ತೋಇ 433 ತೋವಿ 2016, ಬೆಂಗಳೂರು ದಿನಾಂಕ 03-07-2017 ರನ್ವಯ ಮಂಜೂರು ಮಾಡಿರುವುದನ್ನು ಸದಸ್ಯ ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು. ಸುದೀರ್ಘ ಚರ್ಚೆ ನಂತರ, ಮಂಡಳಿಯು ನಡುವಳಿಗಳ ದೃಢೀಕರಣಕ್ಕೆ ಕಾಯದೆ ಕರಡು ಅಧಿಸೂಚನೆಯನ್ನು ಸರ್ಕಾರದ ಮುಖಾಂತರ ಗೌರವಾನ್ವಿತ ರಾಜ್ಯಪಾಲರು ಮತ್ತು ಕುಲಾಧಿಪತಿಗಳು, ತೋವಿವಿ, ಬಾಗಲಕೋಟ ಇವರ ಅನುಮೋದನೆಗಾಗಿ ಸಲ್ಲಿಸಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br><br>(ಕ್ರಮ : ಕುಲಸಚಿವರು) |

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳವರಿಂದ ವಂದಾನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

The meeting was concluded with the vote of thanks Registrar and the Member secretary.

8/8/17

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ

**Registrar & Member-Secretary,**
**Board of Management, UHS, Bagalkot**